# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 487 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ. ರಾಥೋಡ್<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 20.02.2023 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು. |

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಆರೋಗ್ಯ ಇಲಾಖೆಯ ಶುಚಿ ಯೋಜನೆಯಡಿ ಸರ್ಕಾರಿ, ವಸತಿ ಶಾಲಾ ಕಾಲೇಜುಗಳಲ್ಲಿ ಹೆಣ್ಣು ಮಕ್ಕಳಿಗೆ ಸ್ಯಾನಿಟರಿ ನ್ಯಾಪ್‌ಕಿನ್ ಗಳನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ) | ಈ ಯೋಜನೆಗಳನ್ನು ಸ್ಥಗಿತಗೊಳಿಸಲು ಕಾರಣಗಳೇನು; ಈ ನ್ಯಾಪ್‌ಕಿನ್‌ಗಳ ಖರೀದಿಯನ್ನು ಯಾವ ನಿಗಮಕ್ಕೆ ವಹಿಸಲಾಗಿದೆ. | ಸದರಿ ಯೋಜನೆಯನ್ನು ಸ್ಥಗಿತಗೊಳಿಸಿರುವುದಿಲ್ಲ. ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆ ಹಾಗೂ ಯೋಜನೆಯಡಿ ಅಗತ್ಯ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್ ಗಳ ಸಂಗ್ರಹಣೆಗೆ ಕರೆಯಲಾಗಿರುವ ವಿವಿಧ ಟೆಂಡರ್‌ಗಳು ತಾಂತ್ರಿಕ ವೈಫಲ್ಯದಿಂದ ಸಂಗ್ರಹಣೆಯು ವಿಫಲವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕಳೆದ 3 ವರ್ಷಗಳಿಂದ ಮಕ್ಕಳಿಗೆ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್ ಗಳ ಪೂರೈಕೆಯಾಗಿರುವುದಿಲ್ಲ.<br><br>ಈ ಯೋಜನೆಯಡಿ ಅಗತ್ಯ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್ ಗಳ ಖರೀದಿಯನ್ನು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ ರವರಿಗೆ ವಹಿಸಲಾಗಿದೆ. |
| ಇ) | 2021-22ನೇ ಸಾಲಿನ ಬಜೆಟ್‌ನಲ್ಲಿ ಎಷ್ಟು ಹಣವನ್ನು ಮೀಸಲಿರಿಸಲಾಗಿತ್ತು; ಖರೀದಿಗೆ ಒತ್ತು ಕೊಡದೇ ಇರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು? | ಶುಚಿ ಯೋಜನೆಯಡಿ 2021-22ನೇಸಾಲಿನ ಬಜೆಟ್ ನಲ್ಲಿ ರೂ.4700.00 ಲಕ್ಷಗಳ ಅನುದಾನವನ್ನು ಮೀಸಲಿರಿಸಲಾಗಿತ್ತು.<br><br>ಈ ಕಾರ್ಯಕ್ರಮದಡಿ ಸಂಗ್ರಹಣೆ ಪ್ರಕ್ರಿಯೆಗಳಡಿ KSMSCLರವರಿಂದ ಕರೆಯಲಾದ IND-842 ಮತ್ತು IND-914 ಟೆಂಡರ್ ಗಳು ಕ್ರಮೇಣ ತಾಂತ್ರಿಕ ಬಿಡ್ ವೈಫಲ್ಯ ಹಾಗೂ L1 ಬಿಡ್ ದಾರರು ಪೂರ್ಣ ಪ್ರಮಾಣದ ದಾಸ್ತಾನುಗಳನ್ನು ನಿಗದಿತ ಅವಧಿಯೊಳಗೆ ಸರಬರಾಜು ಮಾಡಲು ಸಾಧ್ಯವಿಲ್ಲವೆಂದು ತಿಳಿಸಿದ್ದು, ಈ ಕಾರಣಗಳಿಂದ ಎರಡೂ ಟೆಂಡರ್‌ಗಳು ವಿಫಲವಾಗಿರುತ್ತವೆ. |

| | | |
|---|---|---|
| | | ಈ ಹಿನ್ನೆಲೆಯಲ್ಲಿ ಸರ್ಕಾರದ ಸೂಚನೆಯ ಮೇರೆಗೆ ವಿಭಾಗೀಯವಾರು ಬಿಡ್ ಸಲ್ಲಿಸುವ ಏಕ ಟೆಂಡರ್ (IND-961) ಅನ್ನು ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br>ಮೇಲ್ಕಂಡ ಕಾರಣಗಳಿಂದಾಗಿ ಸಂಗ್ರಹಣೆ ಪ್ರಕ್ರಿಯೆಯು ವಿಳಂಬವಾಗಿರುತ್ತದೆಯೇ ಹೊರತಾಗಿ ಇಲಾಖೆ ಅಥವಾ ಅಧಿಕಾರಿಗಳ ವತಿಯಿಂದ ಯಾವುದೇ ವಿಳಂಬವಾಗಿರುವುದಿಲ್ಲ. |

ಸಂಖ್ಯೆ: ಆಕುಕ 16 ಎಸ್.ಟಿ.ಕ್ಯೂ 2023

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು